ಸಾಕ್ಷಿಯನ್ನು ದಿಃ 30-03-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟಿ ಸವಾಲುಃ ವಾದಿ ಪರಃ ಶ್ರೀ ಎ.ಡಿ.ಸಿ. ವಕೀಲರಿಂದಃ**

ನಾನು 25 ವರ್ಷಗಳಿಂದ ವಕೀಲಿ ವೃತ್ತಿ ಮಾಡುತ್ತಿದ್ದೇನೆ. ನಾನು ಹೆಚ್ಚಾಗಿ ದಸ್ತಾವೇಜು ಮಾಡುವುದಿಲ್ಲ, ಆದರೆ ಕೆಲವರು ಸಂಬಂಧಿಕರು ಮತ್ತು ಕಕ್ಷಿದಾರರು ಕೇಳಿ ಬಂದಲ್ಲಿ ಮಾಡಿರುತ್ತೇನೆ. ದಾನ ಪತ್ರವನ್ನು ಬರೆಯಲು ನನಗೆ ಅಬ್ದುಲ್ ರಜಾಕ್ ಮತ್ತು ಕುಲಸುಂಬಿಯವರು ಹೇಳಿದ್ದರು. ದಾನ ಪತ್ರವನ್ನು ಅಬುಬಕ್ಕರ್ ಹರೂನ್ ಸೈಯ್ಯದ್ ರವರ ಪರವಾಗಿ ಬರೆಯಲಾಗಿದೆ. ಅಬ್ದುಲ್ ರಜಾಕ್ ಮತ್ತು ಕುಲಸುಂಬಿಯವರು ನನಗೆ ಮನೆಗೆ ಕರೆದಿದ್ದು ಅಲ್ಲಿ ಅವರು ದಾನಪತ್ರದ ಬಗ್ಗೆ ಮಾಹಿತಿ ಕೊಟ್ಟಿದ್ದರು. ಅದರ ಪ್ರಕಾರ ನಾನು ದಾನ ಪತ್ರ ತಯಾರಿಸಿದ್ದೇನೆ. ಅದರ ಬಗ್ಗೆ ನಾನು ಕೈ ಬರಹದಲ್ಲಿ ರಫ್ ಆಗಿ ಬರೆದಿದ್ದು ನಂತರ ಟೈಪ್ ಮಾಡಿಸಿದ್ದೇನೆ. ದಾನ ಪತ್ರವನ್ನು ಬಸ್ ನಿಲ್ದಾಣ ಪಕ್ಕದಲ್ಲಿರುವ ಒಂದು ಟೈಪಿಂಗ್ ಸೆಂಟರ್ ನಲ್ಲಿ ಟೈಪ್ ಮಾಡಿಸಿದ್ದೆ. ನನಗೆ ಸ್ವಂತ ಕಚೇರಿ ಇದ್ದು ಅಲ್ಲಿ ಟೈಪಿಂಗ್ ಮತ್ತು ಕಂಪ್ಯೂಟರ್ ಸೌಲಭ್ಯ ಇರಲಿಲ್ಲ. ದಾನ ಪತ್ರ ಯಾರು ಟೈಪ್ ಮಾಡಿದ್ದು ಎಂದು ನಮೂದು ಮಾಡಿಲ್ಲ ಆದರೆ ಅದರ ದಸ್ತೂರು ನಾನು ಎಂದು ಸಹಿ ಹಾಕಿದ್ದೇನೆ. ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿದ್ದು ಸಮನ್ಸ ಕಳುಹಿಸಲು ಅರ್ಜಿಯನ್ನು ಯಾರು ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನನಗೆ ಸಾಕ್ಷಿ ನುಡಿಯಲು ಹೇಳಿರುವುದಿಲ್ಲ. ಇವತ್ತು ಪ್ರತಿವಾದಿ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಪ್ರತಿವಾದಿಯವರು ಈಗ ಹೊರ ದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಅಬ್ದುಲ್ ರಜಾಕ್ ಅಬುಬಕ್ಕರ್ ರವರ ಅಂಕಲ್. ಅವರ ಅಂಕಲ್ ಎಂದು ತೋರಿಸಲು ಯಾವುದೇ ದಾಖಲೆ ನನ್ನ ಬಳಿ ಇಲ್ಲ. ದಾನ ಪತ್ರ ತಯಾರಿಸುವಾಗ ದಾನ ಪತ್ರ ಮಾಡಿಕೊಡುವವರು ಹಾಗೂ ಪಡೆಯುವವರ ಮಾಹಿತಿ ಮತ್ತು ಸಂಬಂಧದ ಬಗ್ಗೆ ನಾನು ದಾಖಲೆಗಳನ್ನು ಪಡೆದಿಲ್ಲ ಅವರು ಹೇಳಿದಂತೆ ದಾಖಲೆ ತಯಾರಿಸಿದ್ದೇನೆ. ದಾನಪತ್ರದಲ್ಲಿ ಸಹೋದರಿಯ ಮಗ ಎಂದು ಬರೆದಿದ್ದು ಯಾವ ಸಹೋದರಿಯ ಯಾವ ಮಗ ಎಂದು ನಮೂದು ಮಾಡಿಲ್ಲ. ಸಾಕ್ಷಿ ಮುಂದುವರಿದು ಫಾತೀಮಾ ರವರು ಸಹೋದರಿಯ ಮಗಳು ಎಂದು ಹೇಳಿದ್ದರು ಎನ್ನುವರು. ಅದನ್ನು ದಾನಪತ್ರದಲ್ಲಿ ಬರೆದಿಲ್ಲ.

ದಾಖಲೆ ತಯಾರಿಸುವಾಗ ಅದಕ್ಕೆ ದಾನ ಪತ್ರ ಎಂದು ಹೆಸರು ಕೊಟ್ಟಿದ್ದು ಎಂದರೆ ಸರಿ. ಅದರೆ ಅದನ್ನು ನೊಂದಣಿ ಮಾಡಿಸುವಾಗ ಪೂರ್ತಿ ನೊಂದಣಿ ಫೀ ಕಟ್ಟಿ ಕ್ರಯ ಪತ್ರ ಎಂದು ನೊಂದಣಿಯಾಗಿದೆ ಎನ್ನುವರು. ದಾನಪತ್ರದಲ್ಲಿ ಡೋನರ್ ಮತ್ತು ಡೋನೀ ಎಂಬ ಪದವನ್ನು ಬಳಕೆ ಮಾಡಲಾಗಿದೆ ಎಂದರೆ ಸರಿ. ಅದು ದಾನಪತ್ರಕ್ಕೆ ಮಾತ್ರ ಅನ್ವಯ ಆಗುತ್ತದೆ ಎಂದರೆ ಸರಿ. ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಕ್ರಯ ಪತ್ರ ಮಾಡಲು ಹೇಳಿದ್ದರು ಎಂದು ತೋರಿಸಲು ಪ್ರತ್ಯೇಕ ದಾಖಲೆ ಇಲ್ಲ. ಆದರೆ ಸಬ ರಜಿಸ್ಟ್ರಾರ್ ರವರು ಅದು ಕುಟುಂಬದ ಒಳಗಡೆ ಬರದೇ ಇದ್ದ ಕಾರಣ ಕ್ರಯ ದಸ್ತಾವೇಜು ಮಾಡಿಸಲು ಹೇಳಿದ್ದರು ಹಾಗೂ ಪೂರ್ತಿ ನೊಂದಣಿ ಶುಲ್ಕವನ್ನು ಪಡೆದಿರುತ್ತಾರೆ. ಕ್ರಯ ದಸ್ತಾವೇಜಿನಲ್ಲಿ ಪರಚೆಸರ್ ಮತ್ತು ಸೆಲ್ಲರ್ ಎಂದು ಬರುತ್ತದೆ ಎಂದರೆ ಸರಿ. ಆ ಶಬ್ದಗಳು ಇದರಲ್ಲಿ ಇಲ್ಲ ಎಂದರೆ ಸರಿ. ಕ್ರಯ ದಸ್ತಾವೇಜಿನಲ್ಲಿ ಆಸ್ತಿಯ ಮಾರುಕಟ್ಟೆ ಬೆಲೆ ನಗದಿಯಾಗಿರುತ್ತದೆ ಎಂದರೆ ಸರಿ. ದಾನಪತ್ರದಲ್ಲಿ ಮಾರುಕಟ್ಟೆ ಬೆಲೆ ನಮೂದು ಮಾಡಿಲ್ಲ ಆದರೆ ಮಾರುಕಟ್ಟೆ ಬೆಲೆ ಪ್ರಕಾರ ಶುಲ್ಕ ನಿಗದಿಯಾಗಿದೆ. ಅದು ಕ್ರಯ ಪತ್ರ ಎಂದು ತೋರಿಸಲು ಸಬ್ ರಜಿಸ್ಟ್ರಾರ್ ಕಚೇರಿಯಿಂದ ಬೇರೆ ಯಾವುದೇ ದಾಖಲೆ ಪಡೆದಿಲ್ಲ. ದಾನಪತ್ರ ಬದಲಾಗಿ ಕ್ರಯದಸ್ತಾವೇಜು ತಯಾರಿಸಲು ತೊಂದರೆ ಇರಲಿಲ್ಲ ಆದರೆ ದಾನಪತ್ರ ಮಾಡುವವರು ದಾನಪತ್ರವನ್ನೇ ಮಾಡಲು ಹೇಳಿದ್ದು ಅದಕ್ಕೆ ಪೂರ್ತಿ ನೊಂದಣಿ ಶುಲ್ಕ ಕಟ್ಟುತ್ತೇನೆ ಎಂದು ಹೇಳಿದ್ದು ಆ ಕಾರಣ ಪ್ರತ್ಯೇಕ ಕ್ರಯ ದಸ್ತಾವೇಜು ತಯಾರಿಸಿಲ್ಲ ಎನ್ನುವರು. ಸಬ್ ರಜಿಸ್ಟ್ರಾರ್ ಕಚೇರಿಯಿಂದ ಸದ್ರಿ ದಾನ ಪತ್ರವನ್ನು ಕ್ರಯ ದಸ್ತಾವೇಜು ಎಂದು ತಿಳಿದುಕೊಳ್ಳಲು ಯಾವುದೇ ಪ್ರತ್ಯೇಕ ದಾಖಲೆ ಬರೆದುಕೊಟ್ಟಿಲ್ಲ. ಅಬ್ದುಲ್ ರಜಕ್ ಮತ್ತು ಕುಲಸುಂಬಿಯವರು ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಅವರು ಆರೋಗ್ಯ ಸರಿ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಗೆ ಆರೋಗ್ಯ ಸರಿ ಇರಲಿಲ್ಲ ಅದರೆ ಅವರು ಕಾರು ಮಾಡಿಕೊಂಡು ಸಬ್ ರಜಿಸ್ಟ್ರಾರ್ ಕಚೇರಿಗೆ ಬಂದು ಹೋಗಿದ್ದಾರೆ ಎನ್ನುವರು. ಸಬ್ ರಜಿಸ್ಟ್ರಾರ್ ಕಚೇರಿಗೆ ಕರೆದುಕೊಂಡು ಹೋಗುವ ಪೂರ್ವದಲ್ಲ್ ಅವರಿಗೆ ವೈದ್ಯಕೀಯ ತಪಾಸಣೆ ಮಾಡಿರುವುದಿಲ್ಲ ಆದರೆ ಅವರು ದಾಖಲೆ ಓದಿ ನೋಡಿ ಸರಿ ಇದೆ ಎಂದು ಒಪ್ಪಿ ಸಾಹಿ ಹಾಕಿದ್ದಾರೆ ಎನ್ನುವರು. ಡೋನರ ಸಹಿಯನ್ನು ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಪಡೆಯಲಾಗಿತ್ತು.

(ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,

ಕಾರವಾರ.